ಶ್ರೀ ಡಿ.ಆರ್.ಪಾಟೀಲ್ : ಗ್ರಾಮ ಅರಣ್ಯ ಸಮಿತಿಗಳನ್ನು ಮಾಡುವುದಕ್ಕೆ ನಾವು ಎಸ್‌ಕರೇಜ್ ಮಾಡುತ್ತೇವೆಂದು ಹೇಳಿದರು. ದಯವಿಟ್ಟು ಬಹಳ ವರ್ಷಗಳಿಂದ ಈ ಪ್ರಯತ್ನ ಸಫಲವಾಗಿಲ್ಲ. ನೀವು ಒಂದು ಟೈಮ್‌ಬೌಂಡ್ ಪ್ರೋಗ್ರಾಮ್ ಮಾಡಿ. ಅಕ್ಟೋಬರ್ ಎರಡರೊಳಗೆ, ನವೆಂಬರ್ ಒಂದರೊಳಗೆ ಎಲ್ಲಾ ಗ್ರಾಮಗಳಲ್ಲಿರುವಂಥ ಅರಣ್ಯ ಜಮೀನಿಗೆ ಅರಣ್ಯ ಸಮಿತಿ ಮಾಡುತ್ತೇವೆಂದು ನೀವು ಘೋಷಣೆ ಮಾಡಿ, ಆ ಪ್ರಕಾರ ಕೆಲಸ ಕಾರ್ಯಕ್ರಮಗಳನ್ನು ಹಚ್ಚಿಸಿದರೆ ಆಗುತ್ತದೆ. ಇಲ್ಲದಿದ್ದರೆ, ವಿಶ್ವೇಶ್ವರ ಹೆಗಡೆಯವರು ಹೇಳಿದಂತೆ ಹಣ ಸರಿಯಾಗಿ ಸದ್ವಿನಿಯೋಗವಾಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಈ ಪ್ರಕಾರ ಬೇಗ ಮಾಡುವುದಿದೆ. ಆದಷ್ಟು ಬೇಗ ಅಂದರೆ ನಾಲ್ಕು ತಿಂಗಳೊಳಗಾಗಿ ಮಾಡಬೇಕೆಂಬ ಉದ್ದೇಶವಿದೆ. ಅಷ್ಟರೊಳಗೆ ಮಾಡುತ್ತೇವೆ.

ಛೇರ್ಮನ್ : ಮಾನ್ಯ ಕಂದಾಯ ಸಚಿವರೆ, ಎಂ.ವೈ.ಪಾಟೀಲರು ಪ್ರಶ್ನೆ (ಪ್ರಶ್ನೆ ಸಂಖ್ಯೆ 555(6020) ಕೇಳಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್ : ದಯಮಾಡಿ ಕ್ಷಮಿಸಬೇಕು. ನನ್ನ ಹತ್ತಿರ ಈ ಕುರಿತಾದ ಕಡತ ಇಲ್ಲ. ಅದನ್ನು ಹೆಲ್ಡ್ ಓವರ್ ಮಾಡಿ, ಬೇರೆ ಪ್ರಶ್ನೆ ತೆಗೆದುಕೊಳ್ಳಿ. ನಾನು ಇನ್ನೈದು ನಿಮಿಷದಲ್ಲಿ ತರಿಸುತ್ತೇನೆ. ಇವೊತ್ತು ನನಗೆ ಎರಡೇ ಪ್ರಶ್ನೆಗಳಿವೆಯೆಂದುಕೊಂಡು ಕಡತ ತಂದಿದ್ದೆ.

ಕೊಳ್ಳೇಗಾಲ ಕ್ಷೇತ್ರದಲ್ಲಿ ವಿದ್ಯುತ್ ಸಮಸ್ಯೆ

547(5804) ಶ್ರೀ ಬಾಲರಾಜ್ ಎಸ್.(ಕೊಳ್ಳೇಗಾಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರಿದ ಯಳಂದೂರು ತಾಲ್ಲೂಕಿನಲ್ಲಿ ವಿದ್ಯುತ್ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಯಳಂದೂರು ತಾಲ್ಲೂಕು ಕೇಂದ್ರ ಸ್ಥಾನವಾಗಿದ್ದು ಇನ್ನೂ ಸಬ್-ಸ್ಟೇಷನ್ ಇಲ್ಲದಿರುವುದೂ ಸಹ ವಿದ್ಯುತ್ ಸಮಸ್ಯೆಗೆ ಕಾರಣವಲ್ಲವೆ;

ಇ) ಹಾಗಿದ್ದಲ್ಲಿ ಸಬ್ ಸ್ಟೇಷನ್ ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಈ) ಹಾಗಿದ್ದಲ್ಲಿ ಇದಕ್ಕೆ ಚಾಲನೆ ನೀಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು ಹಾಗೂ ಎಷ್ಟು ಅವಧಿಯೊಳಗೆ ಪೂರ್ಣ ಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಸೇರಿದ ಯಳಂದೂರು ತಾಲ್ಲೂಕಿನ ಗ್ರಾಮಗಳಾದ ವಡಗೆರೆ, ಕೊಮನಮರ ಮತ್ತು ಸುತ್ತ-ಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಯಳಂದೂರು ತಾಲ್ಲೂಕಿಗೆ ಸಂತೆಮರಹಳ್ಳಿ ಮತ್ತು ಕೊಳ್ಳೇಗಾಲಗಳಲ್ಲಿರುವ 66/11 ಕೆ.ವಿ. ಸಬ್-ಸ್ಟೇಷನ್‌ಗಳಿಂದ ವಿದ್ಯುತ್ ಸರಬರಾಜಾಗುತ್ತಿದೆ. ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಮತ್ತು ವಿದ್ಯುತ್ ಅಡಚಣೆಗಳಾಗುತ್ತಿರುವುದನ್ನು ಗಮನಿಸಿ, ಯಳಂದೂರು ಟೌನಿನಲ್ಲೇ ಒಂದು 66 ಕೆ.ವಿ. ಸಬ್ ಸ್ಟೇಷನ್ ಸ್ಥಾಪಿಸಲು ಕ.ವಿ.ಪ್ರ.ನಿ.ನಿ.ಯು ಉದ್ದೇಶಿಸಿದೆ.

ಇ) ಯಳಂದೂರು ಟೌನಿನಲ್ಲಿ 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ ಸ್ಥಾಪಿಸಲು ಕ.ವಿ.ಪ್ರ.ನಿ.ನಿ.ಯ ತಾಂತ್ರಿಕ ಸಲಹಾ ಸಮಿತಿಯು ಮೇ 2005 ರಲ್ಲಿ ಅನುಮೋದನೆ ನೀಡಿರುತ್ತದೆ. ಆಡಳಿತಾತ್ಮಕ ಅನುಮೊದನೆಗಾಗಿ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಪ್ರಸಕ್ತ ವರ್ಷವಾದ 2005-06ನೇ ಸಾಲಿನ ಆಯ-ವ್ಯಯದಲ್ಲಿ 50 ಲಕ್ಷ ರೂಗಳನ್ನು ಒಸಗಿಸಲಾಗಿದೆ. ಪ್ರಸ್ತಾವಿತ ಸಬ್.ಸ್ಟೇಷನ್‌ಗೆ ಬೇಕಾಗುವ ಸ್ಥಳ ಈಗಾಗಲೇ ಕ.ವಿ.ಪ್ರ.ನಿ.ನಿ.ಯ ವಶದಲ್ಲಿದೆ.

ಈ ಕಾಮಗಾರಿಯ ವಿವರವಾಗ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಆದನಂತರ ಟೆಂಡರಿಂಗ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು. ಕಾಮಗಾರಿಯ ನಿರ್ವಹಣೆಗೆ ಅರ್ಹ ಗುತ್ತಿಗೆದಾರರನ್ನು ಗೊತ್ತುಪಡಿಸಿದ ನಂತರ ಕಾಮಗಾರಿಯನ್ನು ಪೂರ್ಣಗೊಳಿಸಲು 9 ತಿಂಗಳ ಕಾಲಾವಧಿ ಬೇಕಾಗುತ್ತದೆ.

ಶ್ರೀ ಎಸ್.ಬಾಲರಾಜ್ : ಮಾನ್ಯ ಅಧ್ಯಕ್ಷರೆ, ಬಹುತೇಕ ಎಲ್ಲಾ ವಿಚಾರಗಳನ್ನು ಇಂಧನ ಇಲಾಖೆ ಸಮರ್ಪಕವಾಗಿ ಮಾಡಿದೆ ಎನ್ನುವ ರೀತಿಯೇ ಮಾಡಿದ್ದಾರೆ. ಅದರ ಬಗ್ಗೆ ನನ್ನದೇನೂ ತಪ್ಪು ಅಭಿಪ್ರಾಯವಿಲ್ಲ. ಆದರೆ ಸಲಹಾ ಸಮಿತಿ ಮೇ ತಿಂಗಳಿನಲ್ಲಿ ಅನುಮೋದನೆ ನೀಡಿದೆ. ಆಡಳಿತಾತ್ಮಕ ಮಂಜೂರಾತಿ ಅನುಮೋದನೆಗಾಗಿ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತದೆಯೆಂದು ತಿಳಿಸಿದ್ದಾರೆ. ಈ ಸಾಲಿನಲ್ಲಿ ಹಣ ಕೂಡ ಆಯವ್ಯಯದಲ್ಲಿ 50 ಲಕ್ಷ ರೂಪಾಯಿಗಳನ್ನು ಆ ಸಬ್ ಸ್ಟೇಷನ್ ತೆಗೆಯಲು ಒದಗಿಸಲಾಗಿದೆಯೇ ಹೇಳಿದ್ದಾರೆ. ಈ ಕಾಮಗಾರಿ ಪ್ರಾರಂಭಿಸಿದ ನಂತರ 9 ತಿಂಗಳ ಅವಧಿಯಲ್ಲಿ ಅದನ್ನು ಸಂಪೂರ್ಣ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಪ್ರಕ್ರಿಯೆಗೆ ಎಷ್ಟು ಅವಧಿ ಹಿಡಿಯುತ್ತದೆ ಎಂಬ ಬಗ್ಗೆ ಹೇಳಿದರೆ ಸರ್ಮಪಕವಾದ ಉತ್ತರ ನನಗೆ ಸಿಗುತ್ತದೆಂದು ಭಾವಿಸುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡು ತಿಂಗಳಿನಲ್ಲಿ ಟೆಂಡರ್ ಪ್ರಕ್ರಿಯೆಯನ್ನೆಲ್ಲಾ ಮಾಡಿ ಮುಗಿಸಿಕೊಡಲು ಪ್ರಯತ್ನ ಪಡುತ್ತೇವೆ.

ವಿದ್ಯುತ್ ಇಲಾಖೆಯಲ್ಲಿ ಲೈನ್‌ಮ್ಯಾನ್ ಕೊರತೆ

548(5827) ಶ್ರೀ ರಾಘವೇಂದ್ರ ಭಟ್ ಕೆ.(ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಿದ್ಯುತ್ ಇಲಾಖೆಯಲ್ಲಿರುವ ಲೈನ್ ಮ್ಯಾನ್ ಹುದ್ದೆಗಳ ಸಂಖ್ಯೆ ಎಷ್ಟು? ಅದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು;

ಆ) ಈ ಲೈನ್ ಮ್ಯಾನ್‌ಗಳ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ಕ್ರಮಕ್ಕೆಗೊಳ್ಳಲಿದೆ;

ಇ) ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿರುವ ಲೈನ್ ಮ್ಯಾನ್ ಹುದ್ದೆಗಳು ಎಷ್ಟು; ಎಷ್ಟು ಹುದ್ದೆಗಳು ಖಾಲಿ ಇದೆ(ವಿಧಾನ ಸಭಾವಾರು ವಿವರ ನೀಡುವುದು) ;

ಈ) ಗ್ರಾಹಕರಿಂದ ವಿದ್ಯುತ್ ಹಣವನ್ನು ಪಡೆದು ಅವರಿಗೆ ಸಮರ್ಪಕವಾದ ಸೇವೆಯನ್ನು ನೀಡುವುದು ವಿದ್ಯುತ್ ಇಲಾಖೆಯ ಜವಾಬ್ದಾರಿಯಲ್ಲವೇ;

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?